

# ಆ್ಯಪಲ್ ಬಸವರಾಜು!

ಕೃಷಿ ಕ್ಷೇತ್ರದಲ್ಲಿ ಬೆಂಗಳೂರು ಗ್ರಾಮಾಂತರದ ಹೊಸಕೋಟೆ, ಗುಲಾಬಿ ಸೇರಿದಂತೆ ತರಹೇವಾರಿ ಹೂವಿನ ಕೃಷಿಗೆ ಪ್ರಸಿದ್ಧಿ. ಇಲ್ಲಿನ ಹೂಗಳು ವಿದೇಶಗಳಿಗೂ ರವಾನೆಯಾಗುತ್ತವೆ. ಈ ಹೂಗಳ ಬಯಲಲ್ಲಿ ರೈತನೊಬ್ಬ ಸೇಬು ಬೆಳೆದಿದ್ದಾನೆ.

■ ಶಶಿಕುಮಾರ್ ಸಿ.

ಬಡವನ ಪಾಲಿಗೆ ಟೊಮ್ಯಾಟೊ ಹಣ್ಣೇ ಸೇಬು, ಕಡಲೆಕಾಯಿಯೇ ಬಾದಾಮಿ– ಹೀಗಂದುಕೊಂಡೇ ಕೃಷಿ ಬದುಕು ನಡೆಸುತ್ತಿದ್ದ ರೈತ ಬಸವರಾಜು ಮೊದಲ ಬಾರಿಗೆ ಸೇಬು ತಿಂದದ್ದು ತನ್ನ ತಂಗಿಯ ಹೆರಿಗೆ ಸಮಯದಲ್ಲಂತೆ. ಅದಾದ ಮೇಲೆ ಅದರ ರುಚಿ ನೋಡಿದ್ದು, ತನ್ನ ತೋಟದಲ್ಲೇ. ಈಗಂತೂ ದಿನವೂ ಬೆಳಿಗ್ಗೆ ಒಂದು ಹಣ್ಣು, ಸಂಜೆಗೆ ಎರಡು! ತಾವೇ ಬೆಳೆದ ಸೇಬನ್ನು ತಿನ್ನುವ ಖುಷಿ ಅವರದು.

‘ಕಾಶ್ಮೀರದಲ್ಲಿ ಬೆಳೆಯುವ ಸೇಬಿಗಿಂತ ನನ್ನ ತೋಟದಲ್ಲಿನ ಸೇಬಿನ ರುಚಿಯೇ ಹೆಚ್ಚು. ಬೇಕಿದ್ದರೆ ತಿಂದು ನೋಡಿ’ ಎಂದು ತೋಟಕ್ಕೆ ಬರುವವರಿಗೆಲ್ಲ ಹೇಳುವ ಬಸವರಾಜು ಅವರ ಮಾತುಗಳಲ್ಲಿ ರೈತನೊಬ್ಬನ ಸಾಧನೆ ಮತ್ತು ಸಾರ್ಥಕತೆಯ ಭಾವ ಇಣುಕುತ್ತದೆ.

ಹೊಸಕೋಟೆಯ ಸೂಲಿಬೆಲೆ ಹೋಬಳಿಯ ಸಿದ್ದೇನಹಳ್ಳಿ ಗ್ರಾಮದ ಬಸವರಾಜು ಅವರದ್ದು ಮೂಲತಃ ಕೃಷಿ ಕುಟುಂಬ. ಈ ಮೊದಲು ರೇಷ್ಮೆ ಸೇರಿದಂತೆ ತರಕಾರಿ, ಸೊಪ್ಪುಗಳನ್ನು ಬೆಳೆದು ಕೈಸುಟ್ಟುಕೊಂಡಿದ್ದರು. ‘‘ಮುಂಚೆಲ್ಲ ರೇಷ್ಮೆ ಮತ್ತು ತರಕಾರಿ ಬೆಳೆಯುತ್ತಿದ್ದೆ. ಐದಾರು ವರ್ಷದಿಂದೀಚೆಗೆ ಸೊಪ್ಪು ಬೆಳೆದು ಜೀವನ ಸಾಗಿಸುತ್ತಿದ್ದೆ. ಬರುತ್ತಿದ್ದ ಎರಡು ಮೂರು ಸಾವಿರ ರೂಪಾಯಿ ಆದಾಯ ಖರ್ಚಿಗೂ ಸಾಲುತ್ತಿರಲಿಲ್ಲ. ಆರನೇ ತರಗತಿ ಓದುತ್ತಿದ್ದ ನನ್ನ ಚಿಕ್ಕ ಮಗ ಸೃಜನ್ ಒಂದಿನ, ‘ಅಪ್ಪಾ... ಎಸ್ಸೆಸ್ಸೆಲ್ಸಿ ಮುಗಿಸಿ, ಪಿಯುಸಿ ಓದಬೇಕಾದರೆ ಜಾಸ್ತಿ ದುಡ್ಡು ಖರ್ಚಾಗುತ್ತೆ. ಎಲ್ಲಿಂದ ತರ್ತೀಯಾ’ ಅಂತ ಪ್ರಶ್ನೆ ಮಾಡಿದ್ದ. ಆವತ್ತು ಎಚ್ಚೆತ್ತುಕೊಂಡೆ. ನಮ್ಮ ಭಾಗದಲ್ಲಿ ಯಾರೂ ಮಾಡದ ಕೃಷಿ ಮಾಡಲು ನಿರ್ಧರಿಸಿದೆ’’ ಎಂದು ತಮ್ಮ ಸೇಬು ಬೆಳೆಯ ಹಿಂದಿನ ಪ್ರೇರಣೆಯನ್ನು ನೆನಪಿಸಿಕೊಳ್ಳುತ್ತಾರೆ.

## ಯೂಟ್ಯೂಬ್ ಮೊದಲ ಗುರು

ರಾಜ್ಯದ ವಿವಿಧೆಡೆಗಳಲ್ಲಿ ಸೇಬು ಕೃಷಿ ಮಾಡಿದ ಬಗೆಗಿನ ವಿಡಿಯೊಗಳನ್ನು ಬಸವರಾಜು ಯೂಟ್ಯೂಬ್‌ನಲ್ಲಿ ನೋಡಿದ್ದರು. ಅದರಿಂದ ಪ್ರೇರಿತರಾದ ಅವರು, ಬೆಳೆದರೆ ಸೇಬನ್ನೇ ಬೆಳೆಯಬೇಕೆಂದು ನಿರ್ಧರಿಸಿದರು. ಯೂಟ್ಯೂಬ್ ಅನ್ನೇ ಗುರುವಾಗಿಸಿಕೊಂಡು ಸೇಬು ಕೃಷಿಗೆ ತೊಡಗಿದರು.

‘ತುಮಕೂರಿನ ಶಿರಾ ಬಳಿ ಆ್ಯಪಲ್ ಬೆಳೆದ ಬಗ್ಗೆ ಯೂಟ್ಯೂಬ್‌ನಲ್ಲಿ ನೋಡಿದ್ದೆ. ಅಲ್ಲಿಗೆ ಹೋಗಿ ಮಾಹಿತಿ ಪಡೆದೆ. ಆ ರೈತ ಕೊಟ್ಟ ಮಾಹಿತಿ ನನಗೆ ಸಮಾಧಾನ ತರಲಿಲ್ಲ. ಅವರು ಕಾಶ್ಮೀರದ ಡಾ. ಶರ್ಮಾ ಅವರಿಂದ ಗಿಡ ತರಿಸಿದ ಬಗ್ಗೆ ಹೇಳಿದ್ದರು. ಅವರ ಮೊಬೈಲ್ ನಂಬರ್